ದ್ವಿತೀಯ ಲಿಂಗ? | ಗ್ರಾಮೀಣ ತರಗತಿಯಲ್ಲಿ ಲಿಂಗದ ಕುರಿತ ಒಂದು ಸಂಭಾಷಣೆ

ಸುನಿಲ್ ಕುಮಾರ್

ಒಬ್ಬ ಸಮಾಜವಿಜ್ಞಾನ ಶಿಕ್ಷಕನಾಗಿರುವ ನನಗೆ ತರಗತಿಯ 30 ವಿದ್ಯಾರ್ಥಿಗಳಲ್ಲಿ 19 ವಿದ್ಯಾರ್ಥಿಗಳು ಹೆಣ್ಣುಮಕ್ಕಳಿರುವಾಗ ಈ ವಿಷಯವನ್ನು ಸುಲಭವಾಗಿ ವ್ಯವಹರಿಸಲು ಸಾಧ್ಯವಿರಲಿಲ್ಲ. ತರಗತಿಯಲ್ಲಿರುವ ಬಹುತೇಕ ಮಕ್ಕಳು ಬೇರೆಬೇರೆ ಸಾಮಾಜಿಕ ಆರ್ಥಿಕ ಹಿನ್ನೆಲೆಯಿಂದಲೂ ಬಂದಿರುತ್ತಾರೆ. 'ಸಮಾಜ ಹಾಗೂ ಮಹಿಳೆಯರ ಪಾತ್ರ' ಈ ಅಧ್ಯಾಯವನ್ನು ಏಳನೇ ತರಗತಿಯವರಿಗೆ ಬೋಧಿಸುತ್ತಿದ್ದಾಗ ಮಕ್ಕಳಿಗೆ ತಮ್ಮ ಮನೆಗಳಲ್ಲಿಯೇ ಪ್ರತಿದಿನ ಅನುಭವಿಸುವ ಹಾಗೂ ಅವುಗಳನ್ನು ಸಹಿಸಿಕೊಳ್ಳುವ ಸನ್ನಿವೇಶಗಳು ನೆನಪಿಗೆ ಬರುವಂತೆ ಮಾಡಿದವು. ಪಿತೃಪ್ರಧಾನ ವ್ಯವಸ್ಥೆಯೇ ಇನ್ನೂ ಅವರ ಮನೆಗಳಲ್ಲಿ ಬಹಳ ಪ್ರಾಧಾನ್ಯತೆಯನ್ನು ಪಡೆದಿದೆ. ಗಂಡು ಮಗುವನ್ನು ಖಾಸಗಿ ಆಂಗ್ಲ ಮಾಧ್ಯಮ ಶಾಲೆಗೆ ಹಾಗೂ ಹೆಣ್ಣು ಮಗುವನ್ನು ಸರ್ಕಾರಿ ಶಾಲೆಗೆ ಕಳುಹಿಸುವಂತಹ ಹುಡುಗರನ್ನು ಹಾಗೂ ಹುಡುಗಿಯರನ್ನು ಬೆಳೆಸುವ ರೀತಿಯಲ್ಲೇ ಇರುವ ಬಹಳಷ್ಟು ವ್ಯತ್ಯಾಸಗಳನ್ನು ಕಾಣಬಹುದು. ಮಕ್ಕಳು ತಾರತಮ್ಯದ ಹಲವಾರು ರೀತಿಗಳು ಹಾಗೂ ವಿಧಾನಗಳ ಕುರಿತು ಬಹಳ ಬೇಗ ಅರಿವನ್ನು ಹೊಂದಲಿದ್ದರು.

ಈ ವಿಷಯದ ನನ್ನ ಮೊದಲ ದಿನದ ಯೋಜನೆಯು ಲಿಂಗ ವಹಿಸುವ ಪಾತ್ರಗಳ ಬಗೆಗಿನ ಚರ್ಚೆಯೊಂದಿಗೆ ಆರಂಭವಾಯಿತು. ಒಂದು ಹಳ್ಳಿಯಲ್ಲಿ ಹಾಗೂ ಸಮಾಜದಲ್ಲಿ ಗಂಡಸರು ಹಾಗೂ ಹೆಂಗಸರು ಒಟ್ಟಾರೆಯಾಗಿ ಪ್ರತಿದಿನ ನಿರ್ವಹಿಸುವ ಕೆಲಸಗಳು ಹಾಗೂ ವಹಿಸುವ ಪಾತ್ರಗಳ ಕುರಿತು ಒಂದು ಪಟ್ಟಿಮಾಡಲು ಮಕ್ಕಳಿಗೆ ಹೇಳಲಾಯಿತು. ಎಲ್ಲಾ ಮಕ್ಕಳು ಈ ಚರ್ಚೆಯ ಭಾಗವಾಗಿದ್ದರು.

ಚರ್ಚೆಯು ಹುಡುಗರಿಂದ ಆರಂಭವಾಯಿತು. ಅಂದು ಹಾಜರಿದ್ದ ಎಲ್ಲಾ ಹನ್ನೆರಡು ಹುಡುಗರು ಗಂಡಸರು ನಿರ್ವಹಿಸುವ ಕೆಲಸದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಇವುಗಳಲ್ಲಿ ಕೆಲವು ಮುಖ್ಯವಾದವುಗಳು: ಗಂಡಸರು ಗೃಹಕೃತ್ಯವಲ್ಲದ ವ್ಯವಹಾರಗಳನ್ನು ನಿರ್ವಹಿಸುತ್ತಾರೆ, ಅವರು ಹೊರಹೋಗಿ ಕೆಲಸವನ್ನು ಅರಸುತ್ತಾರೆ, ಅವರು ಹೊಲಗಳಲ್ಲಿ ದುಡಿಯುತ್ತಾರೆ ಹಾಗೂ ಕುಟುಂಬದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಹುಡುಗರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿರುವಂತೆಯೇ ಅವುಗಳನ್ನು ಕಪ್ಪುಹಲಗೆಯ ಮೇಲೆ ಬರೆಯಲಾಯಿತು. ಗಂಡಸರು ಮಾಡುವ ಕೆಲಸಗಳು ಕಪ್ಪುಹಲಗೆಯ ಹತ್ತನೇ ಒಂದು ಭಾಗದ ಜಾಗವನ್ನು ಆಕ್ರಮಿಸಿತ್ತು.

ಆನಂತರ ಹುಡುಗಿಯರ ಸರದಿ. ಅವರು ದಿನದ ಆರಂಭದೊಂದಿಗೆ ನಡೆಯುವ ಎಲ್ಲಾ ಕಾರ್ಯಗಳನ್ನು ನೆನಪಿಸಿಕೊಳ್ಳತೊಡಗಿದರು – ನೀರು ತರಲೆಂದು ಬೇಗ ಏಳುವುದು, ಮನೆಯ ಕಸ ಗುಡಿಸುವುದು, ಪ್ರಾಣಿಗಳಿಗೆ ಆಹಾರ ಕೊಡುವುದು, ಮನೆಯ ಎಲ್ಲ ಸದಸ್ಯರಿಗೆ ತಿಂಡಿಯನ್ನು ಮಾಡುವುದು, ಮಕ್ಕಳನ್ನು ಶಾಲೆಗೆ ಹೊರಡಿಸುವುದು, ಮಧ್ಯಾಹ್ನದ ಅಡುಗೆಯನ್ನು ತಯಾರಿಸುವುದು, ಪಾತ್ರೆ ತೊಳೆಯುವುದು, ಮನೆಯಲ್ಲಿರುವ ಮಕ್ಕಳನ್ನು ಹಾಗೂ ಹಿರಿಯರನ್ನು ನೋಡಿಕೊಳ್ಳುವುದು, ಹೊಲದಲ್ಲಿರುವ ಗಂಡಸರಿಗೆ ಸಹಾಯ ಮಾಡುವುದು ಇತ್ಯಾದಿ. ಅವರು ಪಟ್ಟಿ ಮಾಡಿದ ಕಾರ್ಯಗಳಿಂದ ಕಪ್ಪುಹಲಗೆ ಸಂಪೂರ್ಣ ತುಂಬಿಹೋಯಿತು. ಈ ಎಲ್ಲಾ ದುಡಿಮೆಗೆ ಹೆಂಗಸರಿಗೆ ಸಂಭಾವನೆ ಸಿಗುತ್ತದೆಯೇ ಎಂದು ಮಕ್ಕಳನ್ನು ಪ್ರಶ್ನಿಸಿದೆ. ಯಾವುದೇ ಉತ್ತರ ಬರಲಿಲ್ಲ. ಮನೆಯಿಂದ ಹೊರಗೆ ಕೆಲಸ ಮಾಡುವ ಗಂಡಸರ ದುಡಿಮೆಗೆ ಸಂಭಾವನೆ ಸಿಗುತ್ತದೆಯೇ ಎಂದು ಎರಡನೆಯ ಪ್ರಶ್ನೆಯನ್ನು ಕೇಳಿದೆ. ಹೌದೆಂದು ಎಲ್ಲ ಮಕ್ಕಳೂ ಉತ್ತರಿಸಿದರು.

ಗೃಹಕೃತ್ಯದ ಭಾಗವಾಗಿ ಮಕ್ಕಳಿಗೆ ಎರಡು ಪ್ರಶ್ನೆಗಳನ್ನು ಕೊಡಲಾಯಿತು. ಮೊದಲಿಗೆ ಅವರು ಮಾಡುವ ಕೆಲಸಕ್ಕಾಗಿ ಹೆಂಗಸರಿಗೆ ವೇತನ ಏಕೆ ಸಿಗುವುದಿಲ್ಲ ಎಂಬುದಕ್ಕೆ ಕಾರಣ ಹುಡುಕುವುದು. ಎರಡನೆಯದಾಗಿ ತಮ್ಮ ಮನೆಗಳಲ್ಲಿ ಹಾಗೂ ನೆರೆಹೊರೆಯಲ್ಲಿ ಗಂಡಸರು ಹಾಗೂ ಹೆಂಗಸರನ್ನು (ಅದರಲ್ಲಿಯೂ ಎಳೆಯ ಹುಡುಗರು ಹಾಗೂ ಹುಡುಗಿಯರು) ಬೆಳೆಸುವ ರೀತಿಯಲ್ಲಿ ಏನಾದರೂ ವ್ಯತ್ಯಾಸ ಕಾಣುತ್ತದೆಯೇ ಎಂದು ಗಮನಿಸಲು ಹೇಳಲಾಯಿತು. ಚರ್ಚೆಯ ಪ್ರಾರಂಭದಲ್ಲಿ ಹೆಂಗಸರು ವೇತನರಹಿತ ದುಡಿಮೆಯನ್ನು ಬಹಳಷ್ಟು ಮಾಡಿದರೂ ಗಂಡಸರಿಗೆ ಮನೆಯಲ್ಲಿ ಸಿಗುವಷ್ಟು ಗೌರವ ಹೆಂಗಸರಿಗೆ ಸಿಗುವುದಿಲ್ಲ ಎಂದು ಮಕ್ಕಳಿಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು.

ಮರುದಿನ, ಮನೆಕೆಲಸಕ್ಕಾಗಿ ನೀಡಿದ ಪ್ರಶ್ನೆಗಳನ್ನು ಚರ್ಚಿಸುವುದರೊಂದಿಗೆ ಪಾಠ ಆರಂಭವಾಯಿತು. ಮನೆಗೆಲಸವನ್ನು ಮಾಡುವುದು ಅವರ ಕರ್ತವ್ಯವಾದ್ದರಿಂದ ಹೆಂಗಸರಿಗೆ ಅವರು ಮಾಡುವ ಕೆಲಸಕ್ಕಾಗಿ ವೇತನ ಕೊಡುವುದಿಲ್ಲ ಎಂದು ಬಹಳಷ್ಟು ಮಕ್ಕಳು ಸೂಚಿಸಿದರು. ಮಹಿಳೆಯರಲ್ಲದೆ ಈ ಕೆಲಸಗಳನ್ನು ಬೇರೆ ಯಾರು ನಿರ್ವಹಿಸಬಲ್ಲರು ಎಂದು ಅವರು ಗೊಂದಲ-ಕ್ಕೊಳಗಾಗಿದ್ದರು. ಇದೇ ಕೆಲಸವನ್ನು ಮಹಿಳೆಯರು ಹೊರಗೆ ಮಾಡಿದಾಗ ಅವರ ದುಡಿಮೆಗೆ ವೇತನ ಸಿಗುತ್ತದೆ ಎನ್ನುವ ದೃಷ್ಟಿಕೋನವನ್ನು ಇತರ ಮಕ್ಕಳು ಮುಂದಿಟ್ಟರು.

ಚರ್ಚೆಯ ನಡುವೆ ಇನ್ನಷ್ಟು ಪ್ರಶ್ನೆಗಳು ಹೊರಬಂದವು: ಇತರ ದುಡಿಮೆಯಂತೆ ಮನೆಗೆಲಸವೂ ಅಷ್ಟೇ ಮುಖ್ಯವೆಂದು ಪರಿಗಣಿಸಲಾಗದೆ? ಮನೆಗೆಲಸವನ್ನು ಮಾಡುವುದು ಕೇವಲ ಹೆಂಗಸರ ಕರ್ತವ್ಯವೇ? ಚರ್ಚೆಯ ಕೊನೆಗೆ ಮನೆಗೆಲಸವನ್ನು ಮಾಡುವುದು ಗಂಡಸರು ಹಾಗೂ ಹೆಂಗಸರು ಇಬ್ಬರ ಕರ್ತವ್ಯವಾಗಿದ್ದು, ಇಬ್ಬರೂ ಅದನ್ನು ಸಮಾನವಾಗಿ ಹಂಚಿಕೊಳ್ಳಬೇಕು ಎಂಬ ಒಮ್ಮತಕ್ಕೆ ಎಲ್ಲ ಮಕ್ಕಳು ಬಂದರು. ಭಾರತದ ಸಂವಿಧಾನವು ಸಮಾನವಾದ ದುಡಿಮೆಗೆ ಸಮಾನ ವೇತನವಿರಬೇಕು ಎನ್ನುತ್ತದೆ. ಹಾಗಾಗಿ ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡುವುದು ತಪ್ಪು ಎಂಬ ನನ್ನ ದೃಷ್ಟಿಕೋನವನ್ನೂ ಮುಂದಿಟ್ಟೆ.

ಆನಂತರ ಎರಡನೆಯ ಪ್ರಶ್ನೆಯನ್ನು ಕುರಿತು ಚರ್ಚಿಸಲಾಯಿತು. ಹುಡುಗಿಯರು ತಾವು ಗಮನಿಸಿದ ಹಾಗೂ ಎದುರಿಸಿದ ಅಸಂಖ್ಯಾತ ರೀತಿಯ ತಾರತಮ್ಯಗಳ ಕುರಿತು ಹೇಳಿದರು. ಹುಡುಗರಿಗೆ ವಿಮಾನಗಳನ್ನು ಹಾಗೂ ಕಾರುಗಳನ್ನು ಆಟವಾಡಲು ನೀಡಿದರೆ, ಹುಡುಗಿಯರಿಗೆ ಗೊಂಬೆಗಳನ್ನು ಕೊಡಲಾಗುತ್ತದೆ. ಹುಡುಗರಿಗೆ ತಿನ್ನಲು ಸಾಕಷ್ಟು ಆಹಾರವನ್ನು ನೀಡಿದರೆ ಹುಡುಗಿಯರಿಗೆ ತಿಂದುಳಿದದ್ದನ್ನು ನೀಡಲಾಗುತ್ತದೆ. ಹುಡುಗಿಯರಿಗೆ ವಿಧೇಯರಾಗಿ ಮಾತನಾಡಲು ಕಲಿಸಲಾಗುತ್ತದೆ. ಆದರೆ ಹುಡುಗರಿಗಲ್ಲ. ಹುಡುಗರಿಗೆ ತಮಗೆ ಇಷ್ಟವಾದ ಜಾಗದಲ್ಲಿ ಹಾಗೂ ಯಾವ ಹೊತ್ತಿನಲ್ಲಿ ಬೇಕಾದರೂ ಆಟವಾಡಲು ಮತ್ತು ಹೊರಗಡೆ ತಿರುಗಾಡಲು ಮುಕ್ತವಾಗಿ ಅವಕಾಶ ಕೊಡಲಾಗುತ್ತದೆ. ಆದರೆ ಹುಡುಗಿಯರ ಚಲನವಲನದ ಮೇಲೆ ಕಟ್ಟುನಿಟ್ಟಾದ ನಿಗಾ ಇಡಲಾಗುತ್ತದೆ ಹಾಗೂ ರಾತ್ರಿಯ ಹೊತ್ತಿನಲ್ಲಿ ಹೊರಗೆ ಹೋಗುವುದನ್ನು ನಿಷೇಧಿಸಲಾಗುತ್ತದೆ. ಹುಡುಗರಿಗೆ ಉಡಲು ಒಳ್ಳೆಯ ಬಟ್ಟೆಗಳನ್ನು ಕೊಡಲಾಗುತ್ತದೆಯಲ್ಲದೇ, ಒಳ್ಳೆಯ ಶಾಲೆ ಹಾಗೂ ಮನೆಪಾಠಕ್ಕೂ ಕಳುಹಿಸಲಾಗುತ್ತದೆ. ಹುಡುಗಿಯರಿಗೆ ಅದೇ ರೀತಿಯ ಉಪಚಾರ ಅತಿ ವಿರಳವಾಗಿ ಸಿಗುತ್ತದೆ. ಹುಡುಗಿಯರನ್ನು ಸಣ್ಣ ವಯಸ್ಸಿನಲ್ಲಿಯೇ ಮದುವೆ ಮಾಡಿ ಕಳುಹಿಸಲಾಗುತ್ತದೆ, ಆದರೆ ಹುಡುಗರನ್ನಲ್ಲ.

ಸಂಭಾಷಣೆಯ ನಂತರ ನಾನು ಸಮಾನತೆಯ ತತ್ವವನ್ನು ಮಕ್ಕಳಿಗೆ ತಿಳಿಸುತ್ತಾ, ಅದರಲ್ಲಿಯೂ ವಿಶೇಷವಾಗಿ ಎಲ್ಲ ಜನರು ಸಮಾನರು ಹಾಗೂ ಇವುಗಳ ಮೇಲೆ ಲಿಂಗ ಪ್ರಭಾವ ಬೀರುವುದಿಲ್ಲ ಎಂದು ಹೇಳಿದೆನು. ಆದರೂ ನಮ್ಮ ಸಾಮಾಜಿಕ ವ್ಯವಸ್ಥೆ ಗಂಡಸರು ಹಾಗೂ ಹೆಂಗಸರನ್ನು ಸಮಾನರೆಂದು ಪರಿಗಣಿಸಬಾರದು ಎಂಬ ಕಟ್ಟಳೆಯನ್ನು ವಿಧಿಸಿದೆ. ಮನೆಗೆಲಸವು ಕೆಳದರ್ಜೆಯದ್ದು ಎಂದು ನಿಗದಿಪಡಿಸಿ ಇದನ್ನು ಕುಟುಂಬದ ಖಾಸಗಿ ವಿಚಾರ ಹಾಗೂ ಮಹಿಳೆಯರೇ ಇದನ್ನು ಮಾಡಬೇಕಾದುದು ಎಂದು ಹೇಳಲಾಗುತ್ತದೆ. ನಮ್ಮ ಸಮಾಜದಲ್ಲಿರುವ ಲಿಂಗ ಆಧಾರಿತ ತಾರತಮ್ಯಕ್ಕೆ ಇದುವೇ ಬುನಾದಿ. ನಮ್ಮ ಸಂವಿಧಾನವು ಲಿಂಗ ತಾರತಮ್ಯವನ್ನು ತಿರಸ್ಕರಿಸಿದ್ದರೂ, ಇದರ ವಿರುದ್ಧ ಕಾನೂನು ಕ್ರಮಗಳನ್ನು ಕೈಗೊಳ್ಳುವ ಅವಕಾಶವಿದ್ದರೂ ಲಿಂಗ ತಾರತಮ್ಯ ಇನ್ನೂ ಉಳಿದಿದೆ. ಇಂತಹ ಹಲವಾರು ಕಾರಣಗಳಿಂದಾಗಿ, ಹುಡುಗಿಯರು ಶಾಲೆಗಳಿಗೆ ಹೋಗಿ ವಿದ್ಯಾಭ್ಯಾಸವನ್ನು ಪಡೆಯುವುದು ಅಸಾಧ್ಯವಾಗಿದೆ. ಉದ್ಯೋಗ ಪಡೆಯುವುದು ಸಾಧ್ಯವಾಗುತ್ತಿಲ್ಲ ಹಾಗೂ ಅವರಲ್ಲಿ ಅನೇಕರಿಗೆ ಒಂದು ಗೌರವಯುತ ಹಾಗೂ ಪರಿಪೂರ್ಣ ಜೀವನ ದೊರಕುವುದೇ ಬಹು ದೂರದ ಕನಸಾಗಿದೆ.

ನಮ್ಮ ಸಮಾಜವು ಹೆಣ್ಣನ್ನು ದೇವಿಗೆ ಹೋಲಿಸುತ್ತಾ ಅವರನ್ನು ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಲು ಉತ್ಸುಕವಾಗಿರುತ್ತದೆ. ಇಷ್ಟಾಗಿಯೂ ಸಮಾಜವು ಎಂದಿಗೂ ಹೆಣ್ಣಿನ ಸಮಾಜೋ –ಆರ್ಥಿಕ ಸ್ಥಿತಿಯ ಕುರಿತು ಯಾವುದೇ ಚರ್ಚೆಯನ್ನು ಕೈಗೊಳ್ಳುವುದಿಲ್ಲ. ತರಗತಿಯಲ್ಲಿ ಇಂತಹ ವಿಷಯಗಳ ಸುತ್ತಲೂ ಚರ್ಚೆಯು ನಡೆಯಿತು. ಮಕ್ಕಳು ಹಲವಾರು ಪ್ರಶ್ನೆಗಳನ್ನು ಕೇಳಿದರು: 'ಗಂಡಸರು ಹೀಗೇಕೆ ವರ್ತಿಸುತ್ತಾರೆ?', 'ಈ ನಿಯಮಗಳನ್ನು ಮಾಡಿದವರು ಹಾಗೂ ಸಮಾಜದಲ್ಲಿ ಈ ಪಾತ್ರಗಳನ್ನು ನಿಯೋಜಿಸಿದವರು ಯಾರು?' 'ಹೆಣ್ಣು ಮಗುವಿನ ಜನನವನ್ನು ಏಕೆ ಅಪಶಕುನ ಎಂದು ಪರಿಗಣಿಸಲಾಗುತ್ತದೆ?', 'ಹೆಣ್ಣುಮಕ್ಕಳನ್ನು ಗರ್ಭದಲ್ಲಿರುವಾಗಲೇ ಅಥವಾ ಹುಟ್ಟಿದ ನಂತರ ಕೊಲ್ಲುವುದು ಏಕೆ?' ರಾಷ್ಟ್ರದ ಅಭಿವೃದ್ಧಿಗಾಗಿ ತಮ್ಮ ಕೊಡುಗೆಯನ್ನು ನೀಡಿದ



ಚಿತ್ರ ಕೃಪೆ *: SCERT*

ಮಹಿಳೆಯರ ಬಗ್ಗೆ ಮಾಹಿತಿಯನ್ನು ಹುಡುಕಿ ಸಂಗ್ರಹಿಸುವುದೇ ಆ ದಿನದ ಮನೆಕೆಲಸದ ಕಾರ್ಯವಾಗಿತ್ತು.

ಮೂರನೆಯ ದಿನದ ತರಗತಿಯೂ ಮಕ್ಕಳು ಈ ಹಿಂದೆ ನೀಡಿದ ಪ್ರತಿಕ್ರಿಯೆಗಳಿಂದಲೇ ಆರಂಭವಾಯಿತು. ದೇಶದ ಬೆಳವಣಿಗೆಗಾಗಿ ಕೊಡುಗೆ ನೀಡಿದ ಹಲವಾರು ಮಹಿಳೆಯರ ಹೆಸರುಗಳನ್ನು ಮಕ್ಕಳು ಸೂಚಿಸಿದರು: ಇಂದಿರಾ ಗಾಂಧಿ, ಸಾನಿಯಾ ಮಿರ್ಜಾ, ಪಿ.ವಿ.ಸಿಂಧು, ಸೈನಾ ನೆಹ್ವಾಲ್, ಮನೀಶಾ ಠಾಕೂರ್, ಕಲ್ಪನಾ ಚಾವ್ಲಾ, ಕಮಲಾ ಭಸಿನ್ ಹಾಗೂ ಇನ್ನೂ ಹಲವರು. ಇದರೊಂದಿಗೆ ಎಲ್ಲ ಮಹಿಳೆಯರ ಯಶಸ್ಸು ಹಾಗೂ ಅವರ ಕೊಡುಗೆಯ ಹಿಂದಿನ ಪ್ರೇರಕ ಶಕ್ತಿಯೆಂದರೆ ಅವರಿಗೆ ದೊರೆತ ವಿದ್ಯಾಭ್ಯಾಸ ಹಾಗೂ ಅವರ ಹಕ್ಕುಗಳ ಬಗೆಗಿನ ಅರಿವು ಎಂದೂ ಹೇಳಿದೆ.

ಆ ದಿನದ ಯೋಜನೆಯ ಭಾಗವಾಗಿ, ಪ್ರಸ್ತುತ ಮಹಿಳೆಯರಿಗೆ ಆಗುತ್ತಿರುವ ಅನ್ಯಾಯಗಳನ್ನು ಮಕ್ಕಳ ಗಮನಕ್ಕೆ ತರುವುದರ ಜೊತೆಗೆ ಮಹಿಳೆಯರನ್ನು ಕಿರುಕುಳ ಹಾಗೂ ಲೈಂಗಿಕ ದೌರ್ಜನ್ಯದಿಂದ ರಕ್ಷಿಸುವ ಕಾನೂನುಗಳ ಬಗ್ಗೆ ಅರಿವು ಮೂಡಿಸುವುದೂ ಒಳಗೊಂಡಿತ್ತು. ಮಕ್ಕಳಿಗೆ 2005ರ ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯನ್ನು ಪರಿಚಯಿಸಲಾಯಿತು. ಈ ಕಾಯ್ದೆಯ ವ್ಯಾಪ್ತಿಯಲ್ಲಿ ಕೌಟುಂಬಿಕ ಸ್ಥಳಗಳಲ್ಲಿ ದೈಹಿಕ ಹಿಂಸೆ ಹಾಗೂ ಮಾನಸಿಕ ಕಿರುಕುಳವನ್ನು ಎದುರಿಸುವ ಮಹಿಳೆಯರಿಗೆ ಕಾನೂನು ರಕ್ಷಣೆ ಹೇಗೆ ಒದಗಿಸಲಾಗುತ್ತದೆ ಎಂದು ಅವರಿಗೆ ತಿಳಿಸಲಾಯಿತು. ಕೆಲಸ ಮಾಡುವ ಜಾಗದಲ್ಲಿ ಲೈಂಗಿಕ ಕಿರುಕುಳದಿಂದ ಮಹಿಳೆಯರನ್ನು ರಕ್ಷಿಸಲು ಇರುವ ವಿಶಾಖ ಮಾರ್ಗಸೂಚಿಗಳು ವಿಧಿಸುವ ನಿಬಂಧನೆಗಳನ್ನು ಚರ್ಚಿಸಲಾಯಿತು. ಕೊನೆಯದಾಗಿ ಸಂವಿಧಾನವು ದೇಶದ ಎಲ್ಲಾ ನಾಗರೀಕರಿಗೆ ಸಮಾನ ಹಕ್ಕುಗಳನ್ನು ನೀಡಿದ್ದು ಕಾನೂನುಬದ್ಧವಾಗಿ ಅವರನ್ನು ಲಿಂಗ, ಜಾತಿ ಅಥವಾ

ಧರ್ಮದ ಆಧಾರದ ಮೇಲೆ ತಾರತಮ್ಯವನ್ನು ಮಾಡಬಾರದು ಎಂಬುದರ ಅರಿವನ್ನು ಮಕ್ಕಳಿಗೆ ಮೂಡಿಸಲಾಯಿತು.

ಈ ಪಾಠವನ್ನು ಮಕ್ಕಳಿಗೆ ಬೋಧಿಸುವಾಗ ನಾನು ಎದುರಿಸಿದ ಅತ್ಯಂತ ದೊಡ್ಡ ಸವಾಲೆಂದರೆ ಅವರ ಕುಟುಂಬಗಳಲ್ಲಿಯೇ ಲಿಂಗ ಆಧಾರಿತ ತಾರತಮ್ಯದ ವರ್ತನೆಗಳನ್ನು ಗುರುತಿಸುವುದಾಗಿತ್ತು. ತಮ್ಮ ವೈಯಕ್ತಿಕ ಹಾಗೂ ಕೌಟುಂಬಿಕ ವಿಷಯಗಳನ್ನು ಹಂಚಿಕೊಳ್ಳುವುದು ಮಕ್ಕಳಿಗೆ ಸುಲಭವಾಗಿರಲಿಲ್ಲ. ಅವರೆಡೆಗೆ (ಹೆಣ್ಣುಮಕ್ಕಳು) ತೋರುತ್ತಿದ್ದ ಕೆಟ್ಟ ನಡವಳಿಕೆ ಹಾಗೂ ಹಿಂಸೆಯ ವಿರುದ್ಧ ಧ್ವನಿ ಎತ್ತುವಷ್ಟು ಅರಿವು ಹಾಗೂ ಸ್ವಸಾಮರ್ಥ್ಯವನ್ನು ಮೂಡಿಸುವುದು ಒಂದು ಕಠಿಣವಾದ ಕಾರ್ಯವೇ ಆಗಿತ್ತು. ಮಕ್ಕಳ ಅನುಭವಗಳು ಕಣ್ಣು ತೆರೆಸುವಂತಹುದು, ಚಿಂತನೆಗೆ ಹಚ್ಚುವಂಥದ್ದು ಹಾಗೂ ಹೃದಯಸ್ಪರ್ಶಿಯಾಗಿದ್ದವು. ಇವು ವಿವಿಧ ರೀತಿಯ ತಾರತಮ್ಯಗಳ ಬಗೆಗೆ ತಿಳಿದುಕೊಳ್ಳುವುದಕ್ಕೆ ಹೆಚ್ಚಿನ ಅವಕಾಶ ಒದಗಿಸಿದವು.



ಸುನಿಲ್ ಕುಮಾರ್ ಅವರು ಧಮ್‌ತರಿಯಲ್ಲಿರುವ (ಛತ್ತಿಸ್‌ಗಢ್) ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಸಮಾಜವಿಜ್ಞಾನ ಶಿಕ್ಷಕರಾಗಿದ್ದಾರೆ. ಇವರು ಮೊದಲು ನವದೆಹಲಿಯಲ್ಲಿರುವ ಒಂದು ಅಂತರರಾಷ್ಟ್ರೀಯ ಶಾಲೆಯಲ್ಲಿ ಬೋಧಕರಾಗಿದ್ದರು. ಇವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ರಾಜ್ಯಶಾಸ್ತ್ರದಲ್ಲಿ ಪದವಿಯನ್ನು ಪಡೆದಿದ್ದು, ದೆಹಲಿ ವಿಶ್ವವಿದ್ಯಾಲಯದಿಂದ ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಬಿ.ಎಡ್ ಪೂರೈಸಿರುತ್ತಾರೆ. ಇವರಿಗೆ ಚಿತ್ರಕಲೆ ಹಾಗೂ ಪ್ರಯಾಣ ಎಂದರೆ ಬಲು ಇಷ್ಟ. ಇವರನ್ನು sunil.kumar1@azimpremjifoundation.org ಇಲ್ಲಿ ಸಂಪರ್ಕಿಸಬಹುದು.

ಅನುವಾದ: **ವಿನಯಾ ವಿಠ್ಠಲ** । ಪರಿಶೀಲನೆ: **ಲತಾ ಕೆ ಸಿ**